# ಪತ್ರಿಕಾ ಪ್ರಕಟಣೆ

**ವಿಜಯಪುರ**

**ದಿನಾಂಕ; 08/06/2021**

## ನ್ಯೂ ಕಿರಾಣಾ ಬಜಾರದಲ್ಲಿ ಸಿಸಿಟಿವ್ಹಿ ಉದ್ಘಾಟನೆ

ವಿಜಯಪುರ ನಗರದ ನ್ಯೂ ಕಿರಾಣಾ ಬಜಾರದಲ್ಲಿ ಕಿರಾಣಾ ಮರ್ಚಂಟ್ಸ್ ಅಸೋಸಿಯೇಶನ್ ವಿಜಯಪುರ ಇವರ ಸಹಯೋಗದೊಂದಿಗೆ ಸುಮಾರು 6 ಲಕ್ಷ ರೂ.ಗಳ ವೆಚ್ಚದಲ್ಲಿ 36 ನೈಟ್ ವ್ಹಿಜನ್ ಸಿಸಿಟಿವಿ ಹಾಗೂ ಪ್ರತಿಯೊಂದು ಅಂಗಡಿಗಳ ಮುಂದೆ 175 ಸಿಸಿಟಿವ್ಹಿ ಗಳನ್ನು ನ್ಯೂ ಕಿರಾಣಾ ಬಜಾರ ಕೆ.ಐ.ಎ.ಡಿ.ಬಿ ಯಲ್ಲಿ ಅಳವಡಿಸಿದ್ದು, ಅಲ್ಲದೆ ಇಂದು ದಿನಾಂಕ; 08/06/2021 ರಂದು ಬೆಳಿಗ್ಗೆ 10.30 ಗಂಟೆಗೆ ಸಿಸಿಟಿವ್ಹಿ ಮಾನಿಟರಿಂಗ್ ಸೆಂಟರ್‌ನ್ನು ಶ್ರೀ ಅನುಪಮ್ ಅಗ್ರವಾಲ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ವಿಜಯಪುರ ರವರು ಉಧ್ಘಾಟಿಸಿದರು. ನ್ಯೂ ಕಿರಾಣಾ ಬಜಾರ ದಲ್ಲಿ ನಡೆಯುವಂತಹ ಅಪರಾಧಗಳನ್ನು ತಡೆಯಲು, ಹಾಗೂ ಅಪರಾಧಿಗಳ ಮೇಲೆ ನಿಗಾ ಇಡಲು ಇದರಿಂದ ತುಂಬಾ ಸಹಕಾರಿಯಾಗುತ್ತದೆ. ಶ್ರೀ ರಾಮ್ ಎಲ್ ಅರಿಸಿದ್ದಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಶ್ರೀ ಕೆ.ಸಿ.ಲಕ್ಷ್ಮೀನಾರಾಯಣ ಡಿ.ಎಸ್.ಪಿ ವಿಜಯಪುರ, ಶ್ರೀ ಬಸವರಾಜ ಮುಕರ್ತಿಹಾಳ ಸಿಪಿಐ ಗೋಲಗುಂಬಜ ವೃತ್ತ, ಶ್ರೀ ಸೋಮೇಶ ಗೆಜ್ಜಿ ಪಿಎಸ್ಐ (ಕಾ&ಸು) ಎಪಿಎಮ್‌ಸಿ ಪೊಲೀಸ್ ಠಾಣೆ, ಶ್ರೀಮತಿ ಪಿ.ಎಸ್.ಕೂಚಬಾಳ ಪಿಎಸ್ಐ (ಅ.ವಿ) ರವರು ಉಪಸ್ಥಿತರಿದ್ದರು. ಹಾಗೂ ಶ್ರೀ ಡಿ.ಎಸ್.ಗುಡ್ಡೋಡಗಿ (ಅಧ್ಯಕ್ಷರು) ಕಿರಾಣಾ ಮರ್ಚಂಟ್ ಅಸೋಸಿಯೇಶನ್, ಶ್ರೀ ಲಾಲಚಂದ ಜೈನ್ (ಉಪಾಧ್ಯಕ್ಷರು) ಕಿರಾಣಾ ಮರ್ಚಂಟ್ ಅಸೋಸಿಯೇಶನ್, ಶ್ರೀ ಬಾಬುಲಾಲ ಪಿ ಓಸ್ವಾಲ್ ಉಪಾಧ್ಯಕ್ಷರು ಕಿರಾಣಾ ಮರ್ಚಂಟ್ ಅಸೋಸಿಯೇಶನ್, ಶ್ರೀ ಸುಕರಾಜ ಪೋರವಾಲ (ಸೆಕ್ರೇಟರಿ) ಕಿರಾಣಾ ಮರ್ಚಂಟ್ ಅಸೋಸಿಯೇಶನ್, ಹಾಗೂ ಕಿರಾಣಾ ಮರ್ಚಂಟ್ ಅಸೋಸಿಯೇಶನ್‌ನ ಎಲ್ಲ ಸದಶ್ಯರು ಉಪಸ್ಥಿತರಿದ್ದರು.

ಪೊಲೀಸ್ ಅಧೀಕ್ಷಕರು,
ವಿಜಯಪುರ ಜಿಲ್ಲೆ.

ಗೆ,
ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು











